# ಮಾನವನ ಬದುಕಿನಲ್ಲಿ ಭಗವದ್ಗೀತೆಯ ಪ್ರಭಾವ

ಸಿ.ಎಸ್. ಮಂಗಳಮ್ಮ

ಶ್ರೀಮದ್ಭಗವದ್ಗೀತೆಯು ತಾತ್ತ್ವಿಕ, ಧಾರ್ಮಿಕ, ಆಧ್ಯಾತ್ಮಿಕ ಗ್ರಂಥವಾಗಿ ವಿಶ್ವಪ್ರಸಿದ್ಧ. ಆದರೆ ಅದರ ಶ್ರೇಷ್ಠತೆಯಿರುವುದು ಅದು ಎಷ್ಟೊಂದು ಪ್ರಾಯೋಗಿಕ ಎಂಬ ಕಾರಣದಿಂದ; ಹಾಗೂ ಅದರಲ್ಲಿ ದೈನಂದಿನ ಜೀವನಕ್ಕೆ ಅಗತ್ಯವಾದ ನೀತಿ, ಮೌಲ್ಯ, ಆದರ್ಶಗಳಿರುವುದರಿಂದ. ಈ ಅಂಶಗಳನ್ನು ಕುರಿತು ಇಲ್ಲಿ ವಿವರಿಸಿರುವ ಲೇಖಕಿ, ಶ್ರೀರಾಮಕೃಷ್ಣ ಆಶ್ರಮದ ಭಕ್ತರು. ಮೈಸೂರು ನಿವಾಸಿಯಾಗಿರುವ ಅವರು ಹಲವು ಗ್ರಂಥಗಳನ್ನು ರಚಿಸಿದ್ದಾರೆ. ಅವರು ಉತ್ತಮ ವಾಗ್ಮಿ ಕೂಡ ಹೌದು.

**ಮೂಕಂ ಕರೋತಿ ವಾಚಾಲಂ ಪಂಗುಂ ಲಂಘಯತೇ ಗಿರಿಂ ।**
**ಯತ್ಕೃಪಾ ತಮಹಂ ವಂದೇ ಪರಮಾನಂದ ಮಾಧವಮ್ ॥**

ಶ್ರೀಮದ್ಭಗವದ್ಗೀತೆಯ ಫಲಶ್ರುತಿಯಲ್ಲಿ ಬರುವ ಮೇಲಿನ ಶ್ಲೋಕದಿಂದ ಭಗವದ್ಗೀತೆಯ ಪ್ರಭಾವ ಬದುಕಿನಲ್ಲಿ ಎಷ್ಟು ಮಹತ್ತರ ಸ್ಥಾನವನ್ನು ಪಡೆದಿದೆಯೆಂದು ಅರಿವಾಗುತ್ತದೆ. ದಾಸಶ್ರೇಷ್ಠರಾದ ಪುರಂದರದಾಸರು, 'ಮಾನವ ಜನ್ಮ ದೊಡ್ಡದು, ಹಾನಿ ಮಾಡಲಿ ಬೇಡಿ ಹುಚ್ಚಪ್ಪಗಳಿರಾ' ಎಂದು ಜನ್ಮಸಾರ್ಥಕತೆಗೆ ಏನು ಮಾಡಬೇಕು ಎಂಬುದನ್ನು ಸಾರಿದ್ದಾರೆ. ಬದುಕು ಕೇವಲ ಶರೀರ ಪೋಷಣೆ, ಶರೀರ ಸುಖಕ್ಕಲ್ಲ, ಬದುಕು ಮಾನವಧರ್ಮದ ತಳಹದಿಯ ಮೇಲೆ ಕಟ್ಟಿಕೊಳ್ಳುವ ಸುಂದರ ಶಿಲ್ಪವಾಗಬೇಕು. ಇದು ಸುಲಭಸಾಧ್ಯವಲ್ಲ. ಅದಕ್ಕಾಗಿ ಹೋರಾಡಬೇಕು. ಹೋರಾಟದಿಂದ ಗೆದ್ದು, ನಮ್ಮ ಬದುಕಿಗೆ ನೆಲೆಯಾದ ಸಮಾಜದ ಋಣವನ್ನು ತೀರಿಸಬೇಕು.

ಬದುಕು ಸುಖ-ದುಃಖ; ಒಳಿತು-ಕೆಡಕು; ಶುಭ್ರ-ಅಶುಭ್ರ ಇತ್ಯಾದಿ ದ್ವಂದ್ವಗಳಿಂದ ಕೂಡಿರುವಂತಹದು. ಬದುಕಿನಲ್ಲಿ ಬರುವ ಅಡೆ ತಡೆಗಳನ್ನು ಎದುರಿಸಬೇಕು. ಇದು ಹೇಗೆ? ಇದಕ್ಕೆ ಮಾರ್ಗದರ್ಶನ ಹಿರಿಯರ ಅನುಭವ! ಸಾಹಿತ್ಯದಿಂದ ಸಮಾಜದ ಕಲ್ಯಾಣವಾಗುವುದು. ಒಂದು ವಸ್ತುವಿಗೆ ಅಂಟಿದ ಕೊಳೆಯನ್ನು ಕೆಲವು ವಸ್ತುಗಳ ಸಹಾಯದಿಂದ ನೀರಿನ ಮೂಲಕ ತೊಳೆದು ಶುಭ್ರಗೊಳಿಸಬಹುದು. ಅದರಂತೆಯೇ ಮನುಷ್ಯನ ಬದುಕಿನಲ್ಲಿ ಜೊತೆ-ಜೊತೆಗೇ ಅಂಟುವ ನಾನಾ ರೀತಿಯ ಕೊಳೆಗಳನ್ನು ಹಿರಿಯರ ಅನುಭವದ (ಸಾಹಿತ್ಯ) ಮೂಲಕ ಶುಚಿಗೊಳಿಸಿಕೊಂಡು ಶುಭ್ರವಾಗುವುದಕ್ಕೆ ಅವಕಾಶ ಮಾಡಿಕೊಟ್ಟಿದೆ, ವ್ಯಾಸ ಮಹರ್ಷಿಗಳ ಮಹಾಭಾರತ! ಆ ಮಹಾಕಾವ್ಯದ ಮಧ್ಯಭಾಗದಲ್ಲಿದೆ 'ಶ್ರೀಮದ್ಭಗವದ್ಗೀತೆ'! ಇದು ಕೇವಲ ಪಠಣ ಮಾಡಿ, ಪೂಜಿಸುವುದಕ್ಕೆ ಮಾತ್ರ ಸೀಮಿತವಲ್ಲ. ಮಾನವ ತನ್ನ ಬದುಕಿನಲ್ಲಿ ಅಳವಡಿಸಿಕೊಂಡು, ಜೀವನಯಾತ್ರೆಯನ್ನು ಸುಗಮಗೊಳಿಸಿಕೊಳ್ಳಲು ಶ್ರೀಕೃಷ್ಣನಿಂದ ನೀಡಲ್ಪಟ್ಟಿರುವ ಸಂದೇಶ.

ಭಗವದ್ಗೀತೆಯಲ್ಲಿ ಮುಖ್ಯ ಪಾತ್ರಗಳು ನಾಲ್ಕು. ಧೃತರಾಷ್ಟ್ರ, ಸಂಜಯ, ಅರ್ಜುನ, ಕೃಷ್ಣ. ಸಂವಾದರೂಪದಲ್ಲಿ ಬದುಕಿನ ಓರೆ-ಕೋರೆಗಳನ್ನು ತಿದ್ದಿ, ಜಾಗೃತಗೊಳಿಸುವ ರೀತಿ ಪ್ರತಿಯೊಬ್ಬರಿಗೂ ಅನ್ವಯವಾಗುತ್ತದೆ. ವಿಶೇಷವಾಗಿ ಮಾನಸಿಕವಾಗಿ ಸೋತು, ನಿರಾಶೆ ಹೊಂದಿದವರಿಗೆ ಪುನರ್ಜೀವನವನ್ನು ನೀಡುವ ಮಹದ್ಗ್ರಂಥ ಇದಾಗಿದೆ!

ಕೌರವರು-ಪಾಂಡವರು ಕುರುಕ್ಷೇತ್ರದಲ್ಲಿ ಯುದ್ಧ ಸನ್ನದ್ಧರಾಗಿದ್ದಾರೆ. ಕುರುವಂಶದ ರಾಜ ಧೃತರಾಷ್ಟ್ರ ದೃಷ್ಟಿಹೀನ. ಯುದ್ಧದಲ್ಲಿ ಏನಾಗುವುದೋ ಅದನ್ನು ತಿಳಿಯಬೇಕೆಂಬ ಕುತೂಹಲ. ಅದಕ್ಕೆ ತನ್ನ ಆಪ್ತ ಪರಿಚಾರಕನಾದ ಸಂಜಯನನ್ನು ಕೇಳುತ್ತಾನೆ. ಈ ಮೊದಲನೆ ಶ್ಲೋಕವೇ ಭಗವದ್ಗೀತೆಯ ಪ್ರಾರಂಭ ಶ್ಲೋಕ:

**ಧರ್ಮಕ್ಷೇತ್ರೇ ಕುರುಕ್ಷೇತ್ರೇ ಸಮವೇತಾ ಯುಯುತ್ಸವಃ ।**
**ಮಾಮಕಾಃ ಪಾಂಡವಾಶ್ಚೈವ ಕಿಮಕುರ್ವತ ಸಂಜಯ ॥**

ಧೃತರಾಷ್ಟ್ರ ಕಣ್ಣಿನಿಂದ ಮಾತ್ರ ಕುರುಡನಲ್ಲ. ಮಮತೆಯೆಂಬ ತೆರೆಯಲ್ಲಿ ಹೃದಯವೂ ಕುರುಡಾಗಿದೆ. ಈ ಯುದ್ಧಕ್ಕೆ ತನ್ನ ಮೋಹ, ಮಕ್ಕಳ ಮೇಲಿನ ಮಮತೆ ಕಾರಣವೆಂದು ಅಂತರಾಳದಲ್ಲಿ ಚುಚ್ಚುತ್ತಿದೆ. ಅವನೇ ಹೇಳುವಂತೆ 'ಧರ್ಮಕ್ಷೇತ್ರೇ ಕುರುಕ್ಷೇತ್ರೇ' ಎಂಬ ಮಾತು, ಅವನ ಪ್ರಶ್ನೆಗೆ ಉತ್ತರವನ್ನು ತನ್ನಿಂದಲೇ ಪಡೆಯಬಹುದಾಗಿತ್ತು. ಆದರೆ ಅದನ್ನು ಒಪ್ಪಿಕೊಳ್ಳುವ ದೊಡ್ಡತನ ಅವನಲ್ಲಿಲ್ಲ. ಅಂದರೆ ಧರ್ಮಕ್ಕೇ ಜಯವೆಂಬುದು ಈ ಶ್ಲೋಕದಿಂದ ಅರ್ಥವಾಗುತ್ತದೆ. ಎರಡನೇ ಸಾಲಿನಲ್ಲಿ 'ಮಾಮಕಾಃ - ಪಾಂಡವಾಃ' ಎಂದು ಹೇಳುತ್ತಾನೆ. ಇಲ್ಲಿಯೂ ನನ್ನವರು ಎಂಬ ಸ್ವಾರ್ಥದ ಭಾವ ಎದ್ದುಕಾಣುತ್ತದೆ. ಏನು ಮಾಡಿದರು? ಎಂದು ಕೇಳುವುದು ದಡ್ಡತನವನ್ನು ತೋರಿಸುತ್ತದೆ. ರಣರಂಗದಲ್ಲಿ ನಡೆಯುವುದೇನು? ಹೊಡಿ, ಬಡಿ, ತಿವಿ, ಕೊಲ್ಲು, ಇಷ್ಟೇ ಅಲ್ಲವೆ? ಧೃತರಾಷ್ಟ್ರನ ಮನಸ್ಸು ಸಮಸ್ಥಿತಿಯಲ್ಲಿ ಇಲ್ಲ. ಇಂತಹ ಸಮಯದಲ್ಲಿ ಆಪ್ತರೊಬ್ಬರಿಂದ ಹಿತವಾದುದನ್ನು ಕೇಳಲು ಮನಸ್ಸು ಬಯಸುತ್ತದೆ. ಇದು ಪ್ರತಿಯೊಬ್ಬರ ಜೀವನದಲ್ಲಿಯೂ ಸಮಯಾನುಸಾರ ಉಂಟಾಗುವ ಪರಿಸ್ಥಿತಿ. ಆಗ ಸ್ವಲ್ಪ ವಿವೇಚನೆಯಿಂದ ಪ್ರಶ್ನೆ ಕೇಳಿದರೆ, ಉತ್ತರ ಹೇಳುವವರ ಅವಹೇಳನದ ಮಾತುಗಳಿಂದ ತಪ್ಪಿಸಿಕೊಳ್ಳಬಹುದು.

ಸಂಜಯ ವಿವೇಕಿ. ತನ್ನ ಧಣಿಯ ಪ್ರಶ್ನೆಗೆ ನೇರವಾಗಿ ಉತ್ತರ ಕೊಡುವುದಿಲ್ಲ. ಅವನಿಗೂ ಗೊತ್ತಿದೆ, ಕೌರವರ ಅಧರ್ಮದ ಕಥೆ.

ಆದ್ದರಿಂದ ಕೃಷ್ಣ-ಅರ್ಜುನರ ಸಂವಾದದ ಮೂಲಕ ಎಲ್ಲವನ್ನೂ ತಿಳಿಸುತ್ತಾನೆ. ಇಲ್ಲಿ ಯಾವ ಮಾತೂ ಸಂಜಯನದಲ್ಲ. ಕೇವಲ ವೀಕ್ಷಕವಿವರಣೆ ಮಾಡುತ್ತಾನೆ. ವ್ಯಾಸರ ಕೃಪೆಯಿಂದ ಅವನಿಗೆ ರಣಭೂಮಿಯ ದೃಶ್ಯ ಯಥಾವತ್ತಾಗಿ ಗೋಚರಿಸುತ್ತದೆ. ಮೊದಲು ರಣರಂಗದಲ್ಲಿ ಸೇರಿದ್ದ ಎರಡೂ ಪಕ್ಷಗಳ ಸೇನೆಯ ವಿವರಣೆ ಹೇಳುತ್ತಾನೆ. ನಂತರ ಅರ್ಜುನನು ರಥದಲ್ಲಿ ನಿಂತು ಸೇನೆಯನ್ನು ನೋಡುತ್ತಾ, ಶತ್ರುಪಕ್ಷದಲ್ಲಿದ್ದ ಗುರುಹಿರಿಯರು ಬಾಂಧವರನ್ನು ಕಂಡು, ಮಮತೆಯ ಮಾಯೆಯಲ್ಲಿ ಸಿಲುಕಿ, ತನ್ನ ಕರ್ತವ್ಯವನ್ನು ಮರೆತು, ಹೇಡಿಯಂತೆ ಕುಸಿದು ಕುಳಿತುಬಿಡುತ್ತಾನೆ. ಇಲ್ಲಿಯೂ ಮಮತೆಯೇ ಅವನನ್ನು ವಿಸ್ಮೃತನನ್ನಾಗಿ ಮಾಡಿತು. ಆಗ ತನ್ನ ರಥದ ಸಾರಥಿಯಾದ (ಬದುಕಿನ ಸಾರಥಿ) ಕೃಷ್ಣನ ಮಾತಿನಿಂದ ಚುಚ್ಚಲ್ಪಟ್ಟವನಾಗಿ, 'ನನಗೆ ಏನು ಮಾಡ ಬೇಕೆಂದು ತೋರುತ್ತಿಲ್ಲ. ನನಗೆ ದಾರಿತೋರಿಸು. ನೀನು ಹೇಳಿದಂತೆ ಕೇಳುತ್ತೇನೆ – ಶರಣಾಗಿದ್ದೇನೆ' ಎನ್ನುತ್ತಾನೆ. ಅರ್ಜುನನ ಮಮತೆ, ಮಾನವಧರ್ಮಕ್ಕೆ ಸೇರಿದ್ದು. ಆದರೂ ಅದು ಆ ಸಮಯಕ್ಕೆ ತಕ್ಕುದಲ್ಲ. ಶ್ರೀಕೃಷ್ಣ ಅವನಿಗೆ ನೀಡುವ ಉಪದೇಶವೇ ಭಗವದ್ಗೀತೆ.

ಧೃತರಾಷ್ಟ್ರನಿಗೆ ಸಂಜಯನ ಮೂಲಕ ಕೃಷ್ಣವಾಣಿ ತಲುಪಿದೆ. ಇನ್ನು ಕುರುಕ್ಷೇತ್ರದಲ್ಲಿ ನಡೆಯುವ ಯುದ್ಧದಲ್ಲಿ ಜಯ ಯಾರಿಗೆ ಎಂಬುದನ್ನು ಸ್ವತಃ ನಿರ್ಧರಿಸಿಕೊಳ್ಳಬಹುದು. ಧರ್ಮಕ್ಕೆ ಜಯ, ಅಧರ್ಮಕ್ಕೆ ನಾಶ ಎಂಬುದು ಅಂಗೈ ಮೇಲಿನ ನೆಲ್ಲಿಕ್ಕಾಯಿನಂತೆ ಸ್ಪಷ್ಟ. ಕೃಷ್ಣನ ವಾಣಿ ಕೇವಲ ಅರ್ಜುನನ್ನು ಜಾಗೃತಗೊಳಿಸುವುದಕ್ಕಾಗಿ ಅಲ್ಲ, ಪ್ರತಿಯೊಬ್ಬನ ಬದುಕಿಗೂ ಸಂಬಂಧಪಡುತ್ತವೆ. ಸಂಕ್ಷಿಪ್ತವಾಗಿ ಭಗವದ್ಗೀತೆಯ ಶ್ಲೋಕಗಳು ಹೇಗೆ ಮಾನವನ ಬದುಕಿನಲ್ಲಿ ಪ್ರಭಾವ ಬೀರುತ್ತದೆ ಎಂಬುದನ್ನು ಕೆಲವು ಉದಾಹರಣೆಗಳ ಮೂಲಕ ಪ್ರಸ್ತುತ ಪಡಿಸುವುದೇ ಈ ಲೇಖನದ ಉದ್ದೇಶ. ಕೃಷ್ಣನ ದಿವ್ಯಮುಖದಿಂದ ಹೊರಟಿರುವ ವಾಣಿ ಪ್ರತಿಯೊಂದೂ ಅಮೃತಪಾನ ಮಾಡಿಸುವಂತಿದೆ. ಅದನ್ನು ಸವಿಯಲು ಈ ಬರಹ ಪ್ರೋತ್ಸಾಹಿಸಲಿ. ಗೀತಾಮೃತದ ಸವಿಯನ್ನು ಸಂಪೂರ್ಣವಾಗಿ ಅನುಭವಿಸಿ ಉತ್ತಮ ಬದುಕನ್ನು ಬಾಳುವಂತಾಗಲಿ ಎಂಬುದು ಮನದಾಳದ ಮಾತು.

ಕೃಷ್ಣ ಅರ್ಜುನನಿಗೆ ಶರೀರ ಅಶಾಶ್ವತ ಎಂಬುದನ್ನು ಮೊದಲನೆಯದಾಗಿ ಮನದಟ್ಟು ಮಾಡಿಕೊಡುತ್ತಾನೆ. ಅರ್ಜುನ ಬಂಧು-ಬಾಂಧವರನ್ನು ಕೊಲ್ಲಲಾರೆ, ಕೊಂದರೆ ಪಾಪ ಇತ್ಯಾದಿ ಪಾಂಡಿತ್ಯದ ಮಾತುಗಳನ್ನು ಹೇಳುತ್ತಾನೆ. ಆಗ ಕೃಷ್ಣನು ಹೇಳುವ 'ಜಾತಸ್ಯ ಹಿ ಧ್ರುವೋ ಮೃತ್ಯುಃ..' *(ಗೀತೆ, ೨-೨೭)* – ಈ ಶ್ಲೋಕವನ್ನು ಪ್ರತಿಯೊಬ್ಬ ವ್ಯಕ್ತಿಯೂ ಆಳವಾಗಿ ಯೋಚಿಸಬೇಕು. ನಾವು ಪ್ರಪಂಚದಲ್ಲಿ ಎಂದೆಂದಿಗೂ ಶಾಶ್ವತ ಎಂಬ ರೀತಿಯಲ್ಲಿ ಸಂಗ್ರಹಣೆ ಮಾಡುತ್ತೇವೆ. ಅಧಿಕಾರ ಚಲಾಯಿಸುತ್ತೇವೆ. ಕಣ್ಣೆದುರಿಗೇ ಸಾಯುವವರನ್ನು ಕಾಣುತ್ತೇವೆ. ಆಗ ಎಲ್ಲಿಲ್ಲದ ವೈರಾಗ್ಯದ ಮಾತುಗಳನ್ನೂ ಆಡುತ್ತೇವೆ. ಕಾಲಕ್ರಮೇಣ ಮರೆತುಬಿಡುತ್ತೇವೆ. ಅದಕ್ಕೆ ಎಚ್ಚರಿಕೆ ಇದು. ಹುಟ್ಟು ಸಾವು ಅಗೋಚರ ಶಕ್ತಿಯ ಕೈವಾಡ. ಅದಕ್ಕಾಗಿ ಹಿಗ್ಗುವುದೂ ತರವಲ್ಲ, ಕುಗ್ಗುವುದೂ ಸರಿಯಲ್ಲ. ಶಾಶ್ವತವಲ್ಲ ಎಂದರಿತು ಬದುಕನ್ನು ಒಂದು ಕರ್ಮಭೂಮಿಯನ್ನಾಗಿ ಮಾಡಿಕೊಳ್ಳುವುದು ಉತ್ತಮ. ಇದರ ಜೊತೆಗೆ ಇನ್ನೂ ನಾಲ್ಕಾರು ಶ್ಲೋಕಗಳ ಮೂಲಕ ಮನಸ್ಸಿನ ಮೇಲೆ ಪ್ರಭಾವ ಬೀರುವಂತೆ ಮಾಡಿದ್ದಾನೆ. ಸುಖ-ದುಃಖಗಳೂ ಸಹ ಬಂದುಹೋಗುವುವು. ಅದಕ್ಕಾಗಿ ಮನಸ್ಸನ್ನು ಸಮಾಧಾನದಿಂದ ಇರುವಂತೆ ಮಾಡಿಕೊಂಡಾಗ ಬದುಕಿನ ಬಂಡಿ ಸುಗಮವಾಗಿ ಸಾಗಬಲ್ಲದು.

ಸುಖ-ದುಃಖಕ್ಕೆ ಕಾರಣ ಮನಸ್ಸು. ಇದಕ್ಕೆ ಮೂಲ ಆಸೆ. ಆಸೆಯಿಂದ ಮುಕ್ತರಾದವರು ಯಾರೂ ಇಲ್ಲ. ದುಃಖಕ್ಕೆ ಕಾರಣ ಸ್ವಾರ್ಥ. ಇದರಲ್ಲಿ ಆಸೆ ಎರಡು ಬಗೆ. ತನಗಾಗಿ-ಪರರಿಗಾಗಿ ಎಂದು. ಕೇವಲ ತನಗಾಗಿ ಎನ್ನುವ ಜೀವನ ಸಂಕಟಮಯವಾಗುತ್ತದೆ. ಅದಕ್ಕೇ ಶ್ರೀಕೃಷ್ಣನು ಹೇಳುತ್ತಾನೆ :

**ಧ್ಯಾಯತೋ ವಿಷಯಾನ್ ಪುಂಸಃ ಸಂಗಸ್ತೇಷೂಪಜಾಯತೇ।**
**ಸಂಗಾತ್ ಸಂಜಾಯತೇ ಕಾಮಃ ಕಾಮಾತ್ ಕ್ರೋಧೋಭಿಜಾಯತೇ॥**
**ಕ್ರೋಧಾದ್ಭವತಿ ಸಂಮೋಹಃ ಸಂಮೋಹಾತ್ ಸ್ಮೃತಿವಿಭ್ರಮಃ ।**
**ಸ್ಮೃತಿಭ್ರಂಶಾದ್ಬುದ್ಧಿನಾಶೋ ಬುದ್ಧಿನಾಶಾತ್ ಪ್ರಣಶ್ಯತಿ ॥**

(ವಿಷಯಗಳನ್ನು ಚಿಂತಿಸುತ್ತಿರುವ ಪುರುಷನಿಗೆ ಅವುಗಳಲ್ಲಿ ಆಸಕ್ತಿ ಹುಟ್ಟುತ್ತದೆ. ಆಸಕ್ತಿಯಿಂದ ಕಾಮವು ಹುಟ್ಟುತ್ತದೆ. ಕಾಮದಿಂದ ಕ್ರೋಧವುಹುಟ್ಟುತ್ತದೆ. ಕ್ರೋಧದಿಂದಸಂಮೋಹವುಂಟಾಗುತ್ತದೆ. ಸಂಮೋಹದಿಂದ ಸ್ಮೃತಿಯ ಭ್ರಮೆಯುಂಟಾಗುತ್ತದೆ. ಸ್ಮೃತಿಭ್ರಮೆಯಿಂದ ಬುದ್ಧಿನಾಶವಾಗುತ್ತದೆ; ಬುದ್ಧಿನಾಶದಿಂದ ಪುರುಷನು ನಾಶವಾಗುತ್ತಾನೆ.) *(ಗೀತೆ, ೨-೬೨, ೬೩)*

ಮನುಷ್ಯ ಸದಾ ಕ್ರಿಯಾಶೀಲನಾಗಿರಬೇಕು. ಆಗ ಮನಸ್ಸು ವ್ಯರ್ಥ ವಿಷಯಗಳಿಗೆ ಗಮನಕೊಡಲಾರದು. ದೇಹದಲ್ಲಿ ನಡೆಯುವ ಕ್ರಿಯೆ ನಿರಂತರ. ಹುಟ್ಟಿನಿಂದ ಸಾವಿನವರೆಗೂ ಕ್ರಮಬದ್ಧವಾಗಿ ಅದು ನಡೆಯುತ್ತದೆ. ಅದು ಕಣ್ಣಿಗೆ ಕಾಣದು. ದೇಹದ ಹೊರಗೆ ಕಾಣುವ ಇಂದ್ರಿಯಗಳ ಕೆಲಸದ ಮೇಲೆ ಮನಸ್ಸು ಅಧಿಕಾರ ಚಲಾಯಿಸುತ್ತದೆ. ಚಂಚಲವಾದ ಮನಸ್ಸಿನಲ್ಲಿ ದುಷ್ಟಭಾವನೆಗಳು ಮೂಡಿ, ನಮ್ಮ ಕಾರ್ಯಗಳೂ ಕ್ರೌರ್ಯರೂಪವನ್ನು ಪಡೆಯುತ್ತವೆ. ಇದರಿಂದ ಸಮಾಜಕ್ಕೂ ಹಾನಿ. ಮನಸ್ಸನ್ನು ಸದ್ವೃತ್ತಿಯ ಕಡೆಗೆ ತಿರುಗಿಸುವುದಕ್ಕಾಗಿ ಪ್ರಯತ್ನಿಸಬೇಕು. ಇದಕ್ಕಾಗಿ ಶ್ರೀಕೃಷ್ಣನು ಸತ್ಸಂಗದ ಬಗ್ಗೆ ತಿಳಿಸುತ್ತಾನೆ.

ಮನುಷ್ಯ ಸಮಾಜದ ಒಂದು ಅಂಗ. ಪರಸ್ಪರ ಸಹಕಾರವಿಲ್ಲದೆ ಬಾಳು ಸಾಗುವುದಿಲ್ಲ. ಸಹಕಾರದ ಬಗ್ಗೆ 'ದೇವಾನ್ ಭಾವಯತಾನೇನ.. ಪರಮವಾಪ್ಸ್ಯಥ' *(೩-೧೧)* ಎನ್ನುವ ಮೂಲಕ ಹೊಂದಿ ಬಾಳುವುದನ್ನು ತಿಳಿಯಲು ಅನುಕೂಲವಾಗುವುದಿಲ್ಲವೆ? ಶ್ರೀಮಾತೆ ಶಾರದಾದೇವಿಯವರು ಇದನ್ನೇ ತಮ್ಮ 'ಯಾರನ್ನೂ ಪರರೆಂದು ಭಾವಿಸಬೇಡ' ಎಂಬ ಅಂತಿಮವಾಣಿಯಲ್ಲಿ ಸೂಚಿಸಿ

ದ್ದಾರೆ. ನಾವು ಮಾಡುವ ಪ್ರತಿಯೊಂದು ಕೆಲಸವೂ ಶ್ರದ್ಧೆಯಿಂದ ಆಸಕ್ತಿಯಿಂದ ಕೂಡಿದ್ದರೆ, ನಿಷ್ಕಾಮವಾಗಿದ್ದರೆ ಅದು ಉತ್ತಮ ಫಲವನ್ನು ಕೊಟ್ಟೇ ಕೊಡುತ್ತದೆ. '**ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ**'. ನಮ್ಮ ಪ್ರತಿ ಕೆಲಸದ ಹಿಂದೆಯೂ ಅಗೋಚರ ಶಕ್ತಿಯ ಕೈವಾಡವಿದೆ. ಆ ಶಕ್ತಿಯನ್ನು ನಾವು 'ದೇವರು' ಎನ್ನುತ್ತೇವೆ. ಶರೀರದ ಒಳಗಿನ ಕ್ರಿಯೆ ನಡೆಯುವುದೂ ಆ 'ಅಗೋಚರ ಶಕ್ತಿ'ಯಿಂದಲೇ. ಆದ್ದರಿಂದ 'ನಾನು' ಎನ್ನುವುದು ಕೇವಲ ಸ್ವಾರ್ಥ, ಎಲ್ಲವೂ 'ಅವನದು' ಎನ್ನುವುದು ನೆಮ್ಮದಿಗೆ ಮೂಲ. ಅದನ್ನು ಅರಿಯುವುದೇ 'ಜ್ಞಾನ'! ಇದನ್ನೇ ಶ್ರೀರಾಮಕೃಷ್ಣರು 'ಮೂರುಕಾಸಿನ ರೊಟ್ಟಿ ಸಂಪಾದನೆ ವಿದ್ಯೆ' ಅಂದದ್ದು. ನಮ್ಮನ್ನು ನಾವು ಅರಿಯಲು ಪ್ರಯತ್ನಿಸಿದಾಗ, ನಮ್ಮ ಕರ್ತವ್ಯವೇನು ಎಂಬುದರ ಅರಿವಾಗುತ್ತದೆ.

ಧರ್ಮ-ಅಧರ್ಮಗಳ ಪರಿಚಯದಿಂದ, ನಿರಹಂಕಾರಿಗಳಾಗಿ, ಮಾನವನಗುರಿ ಯಾವುದು ಎಂದು ತಿಳಿಯಲಪೇಕ್ಷಿಸುತ್ತೇವೆ. ಗುರುವಿನ ಆವಶ್ಯಕತೆಯನ್ನು ಅನುಭವಿಸುತ್ತೇವೆ. ಗುರುವಿನ ಬಳಿ ಹೇಗೆ ನಡೆದುಕೊಳ್ಳಬೇಕೆಂದು ತಿಳಿಸುತ್ತಾ, ಗುರುವಿನಿಂದ ಪಡೆದ ಅರಿವನ್ನು ಹಂಚುವುದೇ ಗುರುವಿಗೆ ಸಲ್ಲಿಸುವ 'ಗುರುದಕ್ಷಿಣೆ' ಎಂದು, ಪಡೆದದ್ದನ್ನು ಹಂಚಬೇಕೆಂಬ ನೀತಿಯನ್ನು ಹೇಳುತ್ತಾನೆ. ಹೇಗೆ ಸಲ್ಲಿಸಬಹುದು? ವಿಶ್ವವೆಲ್ಲ ಭಗವಂತನದು, ಪ್ರತಿಯೊಂದಕ್ಕೂ ಸಲ್ಲಿಸುವ ಸೇವೆ ಅವನಿಗೆ ಸಲ್ಲುತ್ತದೆ ಎಂದು, ಅರ್ಜುನನಿಗೆ ತನ್ನ ವಿಶ್ವರೂಪವನ್ನು ತೋರಿಸುತ್ತಾನೆ. ಅಂದರೆ ಬ್ರಹ್ಮಾಂಡವೆಲ್ಲ ದೈವಾಂಶದಿಂದ ಕೂಡಿದೆ. ಯಾವ ರೀತಿಯಾದರೂ ಆ ಶಿವನಿಗೇ ಸಲ್ಲುತ್ತದೆ. ಆದ್ದರಿಂದ ಜೀವ ಸೇವೆ – ಶಿವಸೇವೆ ಎಂಬ ಸಾರ್ವತ್ರಿಕ ಸೇವಾಮನೋಭಾವನೆಗೆ ಪುಷ್ಟಿ ಕೊಡುತ್ತಾನೆ.

ಕೃಷ್ಣನ ಉದ್ದೇಶ ಧರ್ಮಸ್ಥಾಪನೆ – ಅಧರ್ಮನಾಶ. ಒಂದು ನೀತಿ, ರೀತಿ, ಕಟ್ಟುಪಾಡಿನಲ್ಲಿ ತನ್ನ-ತನ್ನ ಧರ್ಮ, ಅರ್ಥಾತ್ ಬದುಕಿನ ವೃತ್ತಿಯನ್ನು ಶ್ರದ್ಧೆಯಿಂದ ಮಾಡುವುದು ಧರ್ಮ. ಅದಕ್ಕೆ ವ್ಯತಿರಿಕ್ತವಾದ ನಡೆ ಅಧರ್ಮ. ಅಧರ್ಮದಿಂದ ವ್ಯಕ್ತಿ-ಸಮಾಜಕ್ಕೆ ಕಷ್ಟ ಒದಗಿ ಜೀವನ ಗೊಂದಲಮಯವಾಗುತ್ತದೆ. ಅಂತಹ ಸಮಯದಲ್ಲಿ ಒಬ್ಬ ಅವತಾರ ಪುರುಷನಿಂದ ಗೊಂದಲ ನಾಶವಾಗಿ, ಶಾಂತಿ ನೆಲೆಸುತ್ತದೆ. ಇದನ್ನು '**ಯದಾ ಯದಾ ಹಿ ಧರ್ಮಸ್ಯ ..**' *(೪-೭)* ಎನ್ನುವ ಮೂಲಕ ತಿಳಿಸುತ್ತಾನೆ. ವಿಶ್ವ ದೊಡೆಯನೊಬ್ಬನಿದ್ದಾನೆ ಎಂದು ನಂಬಬೇಕು. ಅವನ ಶಕ್ತಿ ಗುಪ್ತ. ಅವನನ್ನು ಆರಾಧಿಸಿ, ತನ್ನ ಕಷ್ಟ ಸುಖಗಳನ್ನು ಒಪ್ಪಿಸಿ ಬಿಡುವುದು ಬದುಕಿಗೆ ನೆಮ್ಮದಿಯನ್ನು ನೀಡುತ್ತದೆ. ಈ ರೀತಿಯ ಬದುಕನ್ನು 'ಶರಣಾಗತ' ಎನ್ನುತ್ತೇವೆ. ಅದಕ್ಕಾಗಿ ವೈಯಕ್ತಿಕ 'ತ್ಯಾಗ'ದ ಆವಶ್ಯಕತೆ ಇದೆ. ತ್ಯಾಗ ಎಂದರೆ 'ಬಿಡು' ಎಂಬರ್ಥದಿಂದ 'ಆಸೆ'ಯನ್ನು ಮಿತಿಗೊಳಿಸಿಕೊಂಡು, ಲೋಕಕಲ್ಯಾಣಕ್ಕಾಗಿ ದುಡಿಯಬೇಕು. ಇದರಿಂದ ನೆಮ್ಮದಿ ಇದೆ. ಸತ್ಯ, ನೀತಿ, ಧರ್ಮಗಳು ನಿಃಸ್ವಾರ್ಥ ಬದುಕಿಗೆ ಸಹಕಾರಿ. ಮಾನವೀಯ ಗುಣಗಳಾದ ದಯೆ, ವಾತ್ಸಲ್ಯವನ್ನು ಜೀವನದಲ್ಲಿ ಅಳವಡಿಸಿಕೊಳ್ಳಬಹುದಾದ ರೀತಿಗಳನ್ನು ಶ್ರೀಕೃಷ್ಣನು ತಿಳಿಸಿದ್ದಾನೆ. ಶರೀರದಲ್ಲಿ ವ್ಯಾಧಿಯಿಂದ ಒಂದು ಹುಣ್ಣಾದಾಗ, ಅದನ್ನು ನಿಷ್ಕರುಣೆಯಿಂದ ಕತ್ತರಿಸಿ ಹಾಕಬೇಕು. ಅಂತೆಯೇ ಸಮಾಜದ ಹಿತಕ್ಕೆ ಧಕ್ಕೆ ಉಂಟುಮಾಡುವ ಅಧರ್ಮಿಗಳನ್ನು ನಾಶಮಾಡುವುದು ಪಾಪಕಾರ್ಯವಲ್ಲ. ಜಗತ್ತಿನಲ್ಲಿ ನಡೆಯುವ ಕಾರ್ಯಗಳ ನ್ಯಾಯಾನ್ಯಾಯಗಳ ವಿಮರ್ಶಕ ಭಗವಂತ. ನಾವು ಅವನ ಕೈಗೊಂಬೆ. ನಮಗೆ ಸಿಕ್ಕಿರುವ ಪಾತ್ರವನ್ನು ಅಚ್ಚುಕಟ್ಟಾಗಿ ನಿರ್ವಹಿಸುವದಷ್ಟೇ ನಮ್ಮ ಕೆಲಸವೆಂದು ಭಾವಿಸಬೇಕು.

ಆ ರೀತಿಯ ಸಾಧನೆಯ ಜೀವನ ನಡೆಸಲು ಬೇಕಾದ ಧ್ಯಾನ, ತಪಸ್ಸುಗಳ ಬಗ್ಗೆ ತಿಳಿಸುತ್ತಾ, ಇವು ಯಾವುದೂ ಸಾಧ್ಯವಾಗದೆ ಹೋದರೂ, ದೈವ ನಂಬಿಕೆ ಒಂದಿದ್ದರೆ ಸಾಕು. ಆ ಭಗವಂತ ಸರಿದಾರಿಯಲ್ಲಿ ನಡೆಸಿ ದಡಸೇರಿಸುತ್ತಾನೆ. ಭಗವಂತನಲ್ಲಿ ಶರಣಾಗುವುದು ಸುಲಭಸಾಧ್ಯವಿಲ್ಲ. ಉಳಿಪೆಟ್ಟುಗಳನ್ನು ತಿಂದ ಕಲ್ಲು ಸುಂದರ ಮೂರ್ತಿಯಾಗುತ್ತದೆ. ಅಂತೆಯೇ ಜೀವನದ ಕಷ್ಟ ಕೋಟಲೆಗಳನ್ನು ಅನುಭವಿಸಿದಾಗ, ಬಿಡುಗಡೆಯ ಬಗ್ಗೆ ಚಿಂತೆ ಮೂಡುತ್ತದೆ. ಆಗ ಮನಸ್ಸು ಕವಲಾಗಿ, ದಾರಿ ತಿಳಿಯದೆ, ಪತನದ ಕಡೆಗೂ ಜಾರಬಹುದು. ಜಾಗೃತರಾಗಿ ಉದ್ಧಾರದ ಕಡೆ ಗಮನ ಕೊಡುವುದೇ ಉತ್ತಮ ಬದುಕು. ಇದನ್ನೇ ಸಂಸಾರವೆಂಬ ಕೊಳೆಯಿಂದ ಶುಚಿಯಾಗುವುದಕ್ಕೆ, ಬೇಡುವ ಪ್ರಾರ್ಥನೆ. ಭಗವದ್ಗೀತೆಯ ಶ್ಲೋಕಗಳು ಶುದ್ಧೀಕರಣ ವಸ್ತುಗಳೋಪಾದಿಯಲ್ಲಿವೆ.

ಭಗವಂತನಲ್ಲಿ ಶರಣಾದಾಗ 'ಅಹಂ' ಇರುವುದಿಲ್ಲ. ಅವನ ಜವಾಬ್ದಾರಿಗೆ ಸೇರಿದ್ದು ನಮ್ಮ ರಕ್ಷಣೆ. ಗಿರೀಶಚಂದ್ರ ಘೋಷ್ ತನ್ನ ಪರವಾಗಿ ಭಗವಂತನ ನಾಮಸ್ಮರಣೆ ಮಾಡಲು ಶ್ರೀರಾಮಕೃಷ್ಣರಿಗೆ ವಕಾಲತ್ತು ವಹಿಸಿದ ಮೇಲೆ, ಅವನ ಜೀವನದಲ್ಲಿ ನಡೆದ ದುಷ್ಕಾರ್ಯದ ಪಾಪಗಳನ್ನೆಲ್ಲ ತೊಳೆದು, ಭಗವಂತನಿಗೆ ಅರ್ಪಿಸುವ ಸುಂದರ ಪುಷ್ಪವನ್ನಾಗಿಸಲಿಲ್ಲವೆ? 'ಸಂಕಟ ಬಂದಾಗ ವೆಂಕಟರಮಣ'ನನ್ನು ಕರೆಯುತ್ತೇವೆ. ಖಂಡಿತ ಅವನಿಂದ ನಮ್ಮ ದುಃಖ ನಿವಾರಣೆಯಾಗುತ್ತದೆ. ಐಹಿಕ ಸುಖಭೋಗಗಳ ದೃಷ್ಟಿಯಿಂದಲ್ಲ. ಹುಟ್ಟು-ಸಾವಿನ ನಡುವಣ ಗೊಂದಲದ ಬದುಕಿನಲ್ಲಿ ಶಾಂತಿ ಸಿಗುತ್ತದೆ. ಬದುಕು ದುರ್ಭರವಾಗುವುದಿಲ್ಲ ; ಕಡೆ ಹಾಯಿಸುತ್ತಾನೆ.

ಭಗವಂತನ ಕೃಪೆಯಿಂದ ನಮ್ಮ ಬದುಕು ಸಾಗುವ ದಾರಿಗೆ ಅಡ್ಡಗಾಲಾಗುವ ಕಲ್ಲು, ಮುಳ್ಳು, ಹಳ್ಳ-ಕೊಳ್ಳಗಳನ್ನು ದಾಟುವಂತೆ ಪ್ರಭಾವ ಬೀರುವುದರಲ್ಲಿ 'ಭಗವದ್ಗೀತೆ'ಯ ಶ್ಲೋಕಗಳು ಪ್ರೇರಣೆ ನೀಡುತ್ತವೆ; ಇದರಲ್ಲಿ ಸಂದೇಹವಿಲ್ಲ. ನಿತ್ಯಜೀವನದಲ್ಲಿ ಅಳವಡಿಸಿಕೊಳ್ಳಬಹುದಾದ, ಸದಾಕಾಲವೂ ಉಲ್ಲಸಿತರಾಗಿ ಇರುವುದಕ್ಕೆ ಪ್ರೋತ್ಸಾಹಿಸುವ ಶ್ಲೋಕಗಳಿಗೆ ಇಲ್ಲಿ ಕೊರತೆ ಇಲ್ಲ. ಬದುಕನ್ನು ಹಸನುಗೊಳಿಸಿಕೊಳ್ಳಲು, ಉತ್ತಮ ಜೀವನಕ್ಕೆ ಅತ್ಯಂತ ಅವಶ್ಯಕವಾದದ್ದು ಭಗವದ್ಗೀತೆಯಲ್ಲಿ ದೊರಕುತ್ತದೆ.